

### ದುರ್ನಾತ!

ಹುಡುಗಿ: ನಾನು ನಕ್ಕುಬಿಟ್ಟರೆ ಎಷ್ಟೋ ಹುಡುಗರು ಜೀವ ಬಿಡ್ತಾರೆ...

ಗುಂಡ: ಮತ್ತಿನ್ನೇನು? ದಿನ ನಿತ್ಯ ನೀನು ಹಲ್ಲು ಬ್ರಶ್ ಮಾಡಿದ್ದರೆ ಅವರಿಗೆ ಈ ಗತಿ ಬರುತ್ತಿರಲಿಲ್ಲ...!

★★★

### ಸಮಯ ಪ್ರಜ್ಞೆ

ಟ್ರಾಫಿಕ್ ಪೊಲೀಸ್: (ನಡು ರಸ್ತೆಗೆ ಸರಿಯುತ್ತಾ) ನಿಲ್ಲು... ನಿಲ್ಲು... ನಿನ್ನ ಬೈಕಿನ ಹೆಡ್ ಲೈಟ್ಸ್ ಕೆಲಸ ಮಾಡುತ್ತಿಲ್ಲ...

ಗೋಪಿ: ಅಯ್ಯೋ, ಪಕ್ಕಕ್ಕೆ ಸರಿಯಿರಿ ಸಾರ್... ಬೈಕಿನ ಬ್ರೇಕ್ ಕೂಡಾ ಕೆಲಸ ಮಾಡುತ್ತಿಲ್ಲ!

★★★

### ಆರೋಗ್ಯದ ಲಕ್ಷಣ!

ಐಸಿಯೂ ರೂಮಿನಲ್ಲಿ...

ಹೆತ್ತವರು: ಡಾಕ್ಟ್ರೇ, ನಮ್ಮ ಮಗನ ಕಂಡಿಷನ್ ಈಗ ಹೇಗಿದೆ?

ಡಾಕ್ಟರ್: ಅಂಥಾ ತೊಂದರೆಯೇನೂ ಇಲ್ಲ; ನರ್ಸ್ ಬಂದಾಗಲೆಲ್ಲಾ ನಡುವೆ ಕಣ್ಣು ಪಿಳುಕಿಸಿ ನೋಡುತ್ತಾನೆ...!

★★★

### ಆತ್ಮ ರಕ್ಷಣೆ!

ಅಪ್ಪ: ನಿನ್ನ ಎಸ್ಸೆಸ್ಸೆಲ್ಸಿ ರಿಸಲ್ಟ್ ಏನಾಯಿತು?

ಮಗ: ಹೆಡ್ ಮಾಸ್ಟರ್ ಮಗ ಫೇಲಾದ...

ಅಪ್ಪ: ನಿನ್ನದೇನಾಯಿತು?

ಮಗ: ಆ ಡಾಕ್ಟರ್‌ರ ಮಗನೂ ಫೇಲಾದ...

ಅಪ್ಪ: ಸರಿ, ನಿನ್ನದೇನಾಯಿತು ಕಣೋ?

ಮಗ: ಅವ, ವಕೀಲರ ಮಗನಿದ್ದಾನಲ್ಲಾ... ಅವನೂ ಫೇಲ್...

ಅಪ್ಪ: ನಾನು ನಿನ್ನ ಬಗ್ಗೆ ವಿಚಾರಿಸುತ್ತಿದ್ದೇನೆ ಕಣಯ್ಯಾ?

ಮಗ: ನೀವೇನು ಶಿಕ್ಷಣ ಮಂತ್ರಿಯೇ? ನಿಮ್ಮ ಮಗನೂ ಫೇಲಾಗಿದ್ದಾನೆ..!

★★★

### ಸಿಟ್ಟಿನ ಹಕ್ಕಿ!

ಪತ್ನಿ ತನ್ನ ಪತಿಯ ಮೊಬೈಲ್ ಪರೀಕ್ಷಿಸುತ್ತಿದ್ದಾಗ, ಹುಡುಗಿಯರ ನಂಬರ್‌ಗಳನ್ನೆಲ್ಲಾ ಈ ಕೆಳಗಿನಂತೆ ಸೇವ್ ಮಾಡಿರುವುದನ್ನು ಗಮನಿಸುತ್ತಾಳೆ:

ಹೊಸ ಹಕ್ಕಿ, ನೆರೆಮನೆ ಹಕ್ಕಿ, ಹಳೆಹಕ್ಕಿ, ಮೇಲ್ಮನೆ ಹಕ್ಕಿ, ಆಸ್ಪತ್ರೆ ಹಕ್ಕಿ, ಕಾಲೇಜು ಹಕ್ಕಿ, ಸೂಪರ್ ಮಾರ್ಕೆಟ್ ಬರ್ಡ್, ಇನ್ಸೂರೆನ್ಸ್ ಬರ್ಡ್... ಇತ್ಯಾದಿ.

ಕೊನೆಗಾಕೆ ತನ್ನ ನಂಬರನ್ನು ಪರೀಕ್ಷಿಸಿದಾಗ ಕಂಡದ್ದು, 'ಆ್ಯಂಗ್ರೀ ಬರ್ಡ್...!'

(ಸಂಗ್ರಹ) **ರಮಣ್‌ಶೆಟ್ಟಿ ರೆಂಜಾಳ್, ಮುಂಬೈ**


ಚಾರ್ಜ್ ಆಗಿ ಬಿಡಿ! ಆನಂದದ ಹೊಸ ಕ್ಷಿತಿಜಗಳಿಗಾಗಿ...




100% ಆಯುರ್ವೇದಿಕ್ ಮಾಡಲ್ಪಟ್ಟ Stay-on ಫಾರ್ಮುಲಾದಿಂದ ನಿಮ್ಮ ಶರೀರದಲ್ಲಿ ಬೆಳಗಿಸುತ್ತದೆ ಅವಿಶ್ವಸನೀಯ ಉದ್ವೇಗವನ್ನು ಇದು ನಿಮ್ಮ ಜೀವನದಲ್ಲಿ ತುಂಬುತ್ತದೆ ಸೀಮಾತೀತ ಉತ್ಸಾಹ ಹಾಗೂ ಅಭಿಲಾಷೆಯನ್ನು.

1St Time in India

*Result varies from person to person.



ಆಯುರ್ವೇದಿ

ಸ್ಟೇ-ಆನ್® ಓರಲ್ ಲಿಕ್ವಿಡ್



ಕೇವಲ 30* ನಿಮಿಷ ಮೊದಲು ತೆಗೆದುಕೊಳ್ಳಿ

ಎಲ್ಲ ಔಷಧ ಅಂಗಡಿಗಳಲ್ಲಿ ಲಭ್ಯವಾಗಿದೆ